| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 457/2024**

ಪಿಡ್ಬ್ಯೂಃ 2 ಸಿಡ್ಬ್ಯೂಃ 2

ಸಾಕ್ಷಿದಾರಳ ಹೆಸರು : ರತ್ನಾ
ಗಂಡನ ಹೆಸರು : ಶ್ಯಾಮರಾಯ ಆಚಾರಿ
ಪ್ರಾಯ : 63 ವರ್ಷ
ಉದ್ಯೋಗ : ಗೃಹಿಣಿ
ವಾಸ : ದಿಡಿಂಬಿರಿಗುಡ್ಡೆ , ಬಜಗೋಳಿ

ದಿನಾಂಕ 23.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ಗುರುತಿಸಿರುತ್ತಾರೆ.

ಚಾಸಾ- 1, 3, 4 ಪರಿಚಯ ಇದೆ. ಅವರು ನಮ್ಮ ನೆರೆಕರೆಯವರು.

ಸುಮಾರು ಒಂದುವರೆ ವರ್ಷದ ಹಿಂದೆ ನಾನು ವಾಕಿಂಗ್ ಹೋಗುತ್ತಿರುವಾಗ ಸುಮಾರು ಬೆಳಿಗ್ಗೆ 6.00-6.30 ಗಂಟೆ ಸಮಯದಲ್ಲಿ ದಿಡಿಂಬಿರಿ 5 ಸೆಂಟ್ಸ್ ರಸ್ತೆಯ ಬಳಿ ಒಂದು ಹಸು ಬಿದ್ದಿತ್ತು. ಆರೋಪಿ ಟಿಪ್ಪರ್ ಚಲಾಯಿಸಿಕೊಂಡು ಬಂದು ಹಸುವಿನ ಹಿಂದಿನ ಕಾಲಿಗೆ ಢಿಕ್ಕಿಹೊಡೆದಿರುತ್ತಾರೆ. ಅದರ ಪರಿಣಾಮ ಬಿದ್ದಿರುತ್ತದೆ. ಸದ್ರಿ ಹಸು ಚಾಸಾ-1 ರವರದಾಗಿರುತ್ತದೆ. ಸದ್ರಿ ಸ್ಥಳದಲ್ಲಿ ಸುಮಾರು ಜನ ಸೇರಿದ್ದರು. ಚಾಸಾ-1 ಕೂಡಾ ಇದ್ದರು. ಅವರೆಲ್ಲ ಸೇರಿ ಹಸುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. 2 ದಿನಗಳ ನಂತರ ಮನೆಯಲ್ಲಿ ಹಸು ಮೃತಪಟ್ಟಿರುತ್ತದೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ

ಹೇಳಿಕೆ ಪಡೆದುಕೊಂಡಿರುತ್ತಾರೆ. ಈಗ ನಾನು ನೋಡಿದ ನಿಪಿ-7 ಮತ್ತು 8 ಭಾವಚಿತ್ರವನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಆರ್ ಎಸ್ ವಕೀಲರಿಂದಃ

ಟಿಪ್ಪರ್ ವಾಹನದ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಪೊಲೀಸರು ಹೇಳಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಳ್ಳುವಾಗ ಆರೋಪಿಯು ಟಿಪ್ಪರ್ ವಾಹನ ಚಲಾಯಿಸುತ್ತಿದ್ದನ್ನು ಎಂದು ಹೇಳಿರುತ್ತಾರೆ. ನಾನು ವಾಕಿಂಗ್ ಹೋಗುತ್ತಿದ್ದಾಗ ಅಲ್ಲಿ ಹಸು ಒಂದು ಕೆಳಗೆ ಬಿದ್ದಿತ್ತು ಮತ್ತು ಅದರ ಕಾಲಿಗೆ ಪೆಟ್ಟಾಗಿತ್ತು. ನಾನು ಅಲ್ಲಿಗೆ ಹೋಗುವ ಅರ್ಧ ಗಂಟೆ ಮುಂಚೆ ಸದ್ರಿ ಘಟನೆ ಆಗಿರುತ್ತದೆ. ಈ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುವುದಿಲ್ಲ ಯಾಕೆಂದರೆ ಅವರು ಕೇಳಿರುವುದಿಲ್ಲ. ನಾನು ಪ್ರತ್ಯಕ್ಷವಾಗಿ ಹಸು ಕೆಳಗೆ ಬಿದ್ದಿರುವುದು ಮಾತ್ರ ನೋಡಿರುತ್ತೇನೆ . ನಾನು ಸದ್ರಿ ಅಪಘಾತಕ್ಕೆ ಪ್ರತ್ಯಕ್ಷ ಸಾಕ್ಷಿಯಾಗದಿದ್ದ ಕಾರಣ ಆರೋಪಿಯನ್ನು ಪೊಲೀಸರು ಈ ಪ್ರಕರಣಕ್ಕೆ ಸಿಲುಕಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನನ್ನು ಚಾಸಾ-1 ರವರು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನನಗೆ ಚಾಸಾ-1 ರವರು ಯಾವುದೇ ವಿಚಾರವನ್ನು ಸಾಕ್ಷಿಯಾಗಿ ಹೇಳಲು ಹೇಳಿಕೊಟ್ಟಿರುವುದಿಲ್ಲ. ನಾನು ಸದ್ರಿ ಘಟನೆಯ ಬಗ್ಗೆ ಚಾಸಾ-1 ರವರಿಗೆ ಮಾತ್ರ ತಿಳಿಸಿರುತ್ತೇನೆ. ನಾನು ಘಟನಾ ಸ್ಥಳದಿಂದ ಹೋದ ಮೇಲೆ ಎಷ್ಟು ಜನ ಬಂದಿರುತ್ತಾರೆ ಎಂದು ಗೊತ್ತಿಲ್ಲ. ನಾನು ಹೋದ 10 ನಿಮಿಷದ ನಂತರ ಚಾಸಾ-3 ರವರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೆ ಹೇಳಿಕೆ ನೀಡಿರುವುದಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ